ದಿನಾಂಕ **19-03-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಶ್ರೀ ಎ ಎಮ್ ಎಚ್ ವಾದಿ ಪರ ವಕೀಲರಿಂದ -

ನನಗೆ ಸತ್ಯಪ್ಪ ಕೆಂಚಪ್ಪಾ ಮಾಳಗಿ ಇವರ ಪರಿಚಯ ಇರುವುದಿಲ್ಲ. ಸತ್ಯಪ್ಪ ಕೆಂಚಪ್ಪಾ ಮಾಳಗಿ ಇವರು ಕೇಸು ಹಾಕಿದ ಬಗ್ಗೆ ಮಾಹಿತಿ ಇರುತ್ತದೆ. ಅವರು ರಸ್ತೆ ಸಲುವಾಗಿ ಕೇಸು ಹಾಕಿರುತ್ತಾರೆ. ಅವರು ಯಾವ ಸರ್ವೆ ನಂಬರಗೆ ಸಂಬಂಧಿಸಿದಂತೆ ಕೇಸು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಅವರು ಯಾವ ಆಸ್ತಿಯ ಮಾಲಿಕರು ಎಂದು ನನಗೆ ಗೊತ್ತಿಲ್ಲ.

ನಾನು ನ್ಯಾಯಾಲಯದಿಂದ ಬಂದ ಸಮನ್ಸನ್ನು ಓದಿ ತಿಳಿದುಕೊಂಡಿರುತ್ತೇನೆ . ಆಗ ಮೃತ ವಾದಿ ಯಾವ ಸರ್ವೆ ನಂಬರ ಮೇಲೆ ಕೇಸು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಅವರು ಯಾವ ಸರ್ವೆ ನಂಬರ ಮಾಲಿಕರು ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಆ ಬಗ್ಗೆ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ.

ನಾವು ಖರೀದಿ ತೆಗೆದುಕೊಂಡು ಜಮೀನು 179/2 ಕ್ಕೆ ಇರುತ್ತದೆ. ಅದು ಎಷ್ಟು ಕ್ಷೇತ್ರ ಇದೆ ಎಂದು ನನಗೆ ಗೊತ್ತಿಲ್ಲ. ಅದರ ಮೂಲ ಮಾಲಿಕರು ಬಾಳಪ್ಪ ಮಲ್ಲಪ್ಪ ಮಾಳಗಿ ಮತ್ತು ಕರೆಪ್ಪ ಮಲ್ಲಪ್ಪ ಮಾಳಗಿ . ನಾವು ಬಾಳಪ್ಪ ಮಲ್ಲಪ್ಪ ಮಾಳಗಿ ಇವರ ಕಡೆಯಿಂದ 2 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇವೆ. ಖರೀದಿ ಪತ್ರ ನಮ್ಮ ತಂದೆಯವರ ಹೆಸರಿನಲ್ಲಿರುತ್ತದೆ. ಸಾಕ್ಷಿ ಹೇಳಲು ಬರುವುದಕ್ಕಿಂತ ಮುಂಚೆ ನಾನು ಸದ್ರಿ ಖರೀದಿ ಪತ್ರವನ್ನು ನೋಡಿರುವುದಿಲ್ಲ. ಸದ್ರಿ ಖರೀದಿ ಪತ್ರವನ್ನು ಈ ಕೇಸಿನಲ್ಲಿ ಹಾಜರ ಪಡಿಸಿರುವುದಿಲ್ಲ. ಖರೀದಿ ಪತ್ರ ನೊಂದ ಆಗಿದೆಯೋ ಇಲ್ಲವೊ ನಮ್ಮ ತಂದೆಯವರಿಗೆ ಗೊತ್ತು. ನಮ್ಮ ತಂದೆ ಈಗ್ಗೆ 6 ತಿಂಗಳ ಹಿಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆ ಜೀವಂತ ಇದ್ದಾಗ ಸದ್ರಿ ಖರೀದಿ ಪತ್ರವನ್ನು ಹಾಜರ ಪಡಿಸಿರುವುದಿಲ್ಲ. ನಮ್ಮ ತಂದೆ ಖರೀದಿ ಪತ್ರವನ್ನು ಗ್ರಾಮ ಪಂಚಾಯತಿಗೆ ಕೊಟ್ಟಿರುತ್ತಾರೆ. ಖರೀದಿ ಪತ್ರ ಗ್ರಾಮ ಪಂಚಾಯತಿಗೆ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ಸದ್ರಿ ಖರೀದಿ ಪತ್ರವನ್ನು ಹಾಜರ ಪಡಿಸಲು ಸಾಧ್ಯತೆ ಇರುತ್ತದೆ. ನಮ್ಮ ತಂದೆ ಹೆಸರಿನಲ್ಲಿ ಯಾವುದೇ ಖರೀದಿ ಪತ್ರ ಆಗದೇ ಇರುವುದರಿಂದ ಅದನ್ನು ಹಾಜರ ಪಡಿಸಿಲ್ಲ ಎಂದರೆ

ಸರಿಯಲ್ಲ. ಖರೀದಿ ಪತ್ರ ಸಬ ರಿಜಿಸ್ಟ್ರಾರ ಕಛೇರಿಯಲ್ಲಿ ನೊಂದು ಆಗಿದ್ದರೆ ಅದನ್ನು ಹಾಜರ ಪಡಿಸಲು ಸಾಧ್ಯತೆ ಇದೆಯಾ ಎಂಬ ಪ್ರಶ್ನೆಗೆ ಅದು ನಮ್ಮ ತಂದೆಯವರಿಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಸದ್ರಿ ಖರೀದಿ ಪತ್ರವನ್ನು ಪರಿಶೀಲಿಸಲು ಪ್ರಯತ್ನ ಮಾಡಿರುವುದಿಲ್ಲ.

ನಮ್ಮ ತಂದೆಯವರು ಆ್ತಯನ್ನು ಎಷ್ಟು ರೂಪಾಯಿಗಳಿಗೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ದಿನಾಂಕ 22-09-2008 ರಂದು ಖರೀದಿ ಮಾಡಿರುತ್ತಾರೆ. 2 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ಕೆನಾಲ ರಸ್ತೆ , ಪಶ್ಚಿಮಕ್ಕೆ 179/2 ರ ಜಮೀನು , ಉತ್ತರಕ್ಕೆ ಗೌಡಪ್ಪ ಪಾಟೀಲ ಇವರ ಜಮೀನು , ದಕ್ಷಿಣಕ್ಕೆ ಕರೆಪ್ಪ ಬಾಳಪ್ಪ ಮಾಳಗಿ ಇವರ ಜಾಗ ಇರುತ್ತದೆ. ಅವುಗಳ ಸರ್ವೆ ನಂಬರ ನನಗೆ ಗೊತ್ತಿಲ್ಲ. ಈ ಚೆಕ್ಕುಬಂದಿ ನಡುವೆ ಬಾಳಪ್ಪನ ಆಸ್ತಿ ಇಲ್ಲ ಎಂದರೆ ಸರಿಯಲ್ಲ.

ನಮ್ಮ ತಂದೆ ಖೊಟ್ಟಿ ಚೆಕ್ಕುಬಂದಿ ಸೃಷ್ಟಿ ಮಾಡಿ ಕಾಗದ ಪತ್ರವನ್ನು ತಯಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಗೆ ಹೊಂದಿಕೊಂಡು ಮೃತ ಸತ್ಯಪ್ಪ ಕೆಂಚಪ್ಪ ಮಾಳಗಿ ಇವರ ಜಾಗ ಬರುವುದಿಲ್ಲ. ಈ ಮೇಲೆ ಹೇಳಿದ ಚೆಕ್ಕುಬಂದಿ ನಡುವಿನ ಆಸ್ತಿಗೆ ಬಾಳಪ್ಪನೇ ಮಾಲಿಕ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆರ್ ಟಿ ಸಿ ಉತಾರ ಇರುತ್ತದೆ. ಆರ್ ಟಿ ಸಿ ಉತಾರದಲ್ಲಿ ಚೆಕ್ಕುಬಂದಿ ಬರೆಯುವುದಿಲ್ಲ. ಸರ್ವೆ ನಂ. 179/2 ಕ್ಕೆ ಸಂಬಂಧಿಸಿದಂತೆ ಪಿಟಿ ಶೀಟ ನೋಡಿರುವುದಿಲ್ಲ. ಸದ್ರಿ ಜಮೀನು ಶೇತಗಿ ಜಮೀನೋ ಅಥವಾ ಬಿನ್ ಶೇತಗಿ ಜಮೀನೋ ಎಂದು ನನಗೆ ಗೊತ್ತಿಲ್ಲ. ಶೇತಗಿ ಜಮೀನು ಎಂದರೆ ಉಳಿಮೆ ಮಾಡುವ ಜಮೀನು ಬಿನ್ ಶೇತಗಿ ಜಮೀನು ಎಂದರೆ ಕಟ್ಟಡ ವಗೈರೆಗಳಿಗೆ ಉಪಯೋಗಿಸುವ ಜಮೀನು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 179/ಬಿ/2 ಜಮೀನು ಶೇತಗಿ ಜಮೀನು ಎಂದರೆ ಸರಿಯಲ್ಲ. ಸದ್ರಿ ಜಮೀನು ಶೇತಗಿ ಜಮೀನಿನಿಂದ ಬಿನ್ ಶೇತಗಿ ಜಮೀನು ಅಂತಾ ಪರಿವರ್ತನೆ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 179/ಬಿ/2 ಜಮೀನಿನ ಉತಾರ ನೋಡಿರುತ್ತೇನೆ. ಸದ್ರಿ ಜಮೀನಿನ ಉತಾರದಲ್ಲಿ ನಮ್ಮ ತಂದೆ ಹೆಸರು ಇಲ್ಲ ಎಂದರೆ ಸರಿ . ಖರೀದಿ ಪಡೆದುಕೊಂಡ ಜಮೀನಿನಲ್ಲಿ ಹೆಸರು ನಮೂದು ಮಾಡಲು ಕಂದಾಯ ಅಧಿಕಾರಿಗಳಿಗೆ ಅರ್ಜಿ ಕೊಡಬೇಕಾಗುದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಕಂದಾಯ ಇಲಾಖೆಯಲ್ಲಿ ಅರ್ಜಿ ಕೊಟ್ಟಿರಬಹುದು ನನಗೆ ಗೊತ್ತಿಲ್ಲ. ನಮ್ಮ ತಂದೆ ತೀರಿಕೊಂಡ ನಂತರ ವಾರಸಾ ಮಾಡಿಸಿಕೊಳ್ಳಲು ನಾವು ಪ್ರಯತ್ನ ಮಾಡಿರುವುದಿಲ್ಲ. ಸರ್ವೆ ನಂ. 179/ಬಿ/2 ಜಮೀನಿನಲ್ಲಿ 2 ಗುಂಟೆ

ಖರೀದಿ ಪಡೆದುಕೊಂಡಿಲ್ಲ ಆದಕಾರಣ ಅವರ ಹೆಸರು ದಾಖಲ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ. 179/ಬಿ/3 ರ ಜಮೀನು ಯಾರ ಹೆಸರಿಗೆ ಇದೆ ಎಂದು ನನಗೆ ಗೊತ್ತಿಲ್ಲ. ಮೃತ ಸತ್ಯಪ್ಪ ಕೆಂಚಪ್ಪ ಮಾಳಗಿ ಇವರ ಈ ದಾವೆಯಲ್ಲಿ ಹಾಜರ ಪಡಿಸಿದ ದಾಖಲೆಗಳನ್ನು ನೋಡಿರುವುದಿಲ್ಲ. ಸರ್ವೆ ನಂ. 179/ಬಿ/3 ರಜಮೀನು ಮೃತ ಸ್ವಪ್ಪ ಕೆಂಚಪ್ಪ ಮಾಳಗಿ ಇವರ ಜಮೀನು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 179/ಬಿ/3 ಮತ್ತು ಸರ್ವೆ ನಂ. 179/ಬಿ/2 ಇವು ಒಂದಕ್ಕೊಂದು ಹೊಂದಿಕೊಂಡ ಜಮೀನು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 179/ಬಿ/2 ರ ಜಮೀನು ಪೂರ್ವ ಪಶ್ಚಿಮವಾಗಿ ಇದೆ ಎಂದರೆ ಸರಿ. ಇದೇ ಜಮೀನಿಗೆ ಹೊಂದಿಕೊಂಡು ದಕ್ಷಿಣಕ್ಕೆ ಸರ್ವೆ ನಂ. 179/ಬಿ/3 ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 179/ಬಿ/3 ರ ಜಮೀನಿಗೆ ಹೊಂದಿ ದಕ್ಷಿಣಕ್ಕೆ ಪಾಶ್ಚಾಪೂರ - ಬೆಳಗಾವಿ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ. 179/ಬಿ/3 ರಲ್ಲಾಗಲೀ ಹಾಗೂ ಸರ್ವೆ ನಂ. 179/ಬಿ/2 ರಲ್ಲಾಗಲೀ ಯಾವುದೇ ಸಾರ್ವಜನಿಕ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಉತ್ತರ ದಕ್ಷಿಣವಾಗಿ ರಸ್ತೆ ಇರುತ್ತದೆ. ಅದಕಜ್ಜೆ ಅಡ್ಡಹಾದಿ ಮತ್ತು ಕಿನಾಲ ರಸ್ತೆ ಎಂದು ಕರೆಯುತ್ತಾರೆ. ಸ್ದ್ರಿ ಜಮೀನುಗಳಲ್ಲಿ ಕಿನಾಲ ಇರುತ್ತದೆ . ಕಿನಾಲ ಎಷ್ಟು ಅಗಲ ಎಷ್ಟು ಉದ್ದ ಇದೆ ಎಂದು ನನಗೆ ಗೊತ್ತಿಲ್ಲ. ನೀರಾವರಿ ಕಿನಾಲ ಇದೆ ಎಂದು ಆರ್ ಟಿ ಸಿಯಲ್ಲಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಒಂದು ವೇಳೆ ರಸ್ತೆ ಇದ್ದರೆ ಗ್ರಾಮ ನಕಾಶೆಯಲ್ಲಿ ನಮೂದು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 179/ಬಿ/2 ರ ಆರ್ ಟಿ ಸಿ ಉತಾರದಲ್ಲಿ ರಸ್ತೆ ಇದ್ದ ಬಗ್ಗೆ ನಮಾದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಇವತ್ತಿನವರೆಗೂ ಗ್ರಾಮ ನಕಾಶೆ ತೆಗೆದು ರಸ್ತೆ ಇದ್ದ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ಸರ್ವೆ ನಂ. 179/ಬಿ/2 ರ ಜಮೀನಿನಲ್ಲಿ ಯಾವುದೇ ರಸ್ತೆ ಇಲ್ಲ ಹಾಗೂ ಕಿನಾಲ ಇಲ್ಲ ಎಂದರೆ ಸರಿಯಲ್ಲ. ಆದಕಾರಣ ಯಾವುದೇ ದಾಖಲೆಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 179/ಬಿ/2 ಜಮೀನಿನ ಪಶ್ಚಿಮಕ್ಕೆ ಒಂದು ಸಾರ್ವಜನಿಕ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರಸ್ತೆ ಮೂಲಕ ನಾವೆಲ್ಲರೂ ನಮ್ಮ ಊರಿನ ದೇವಸ್ಥಾನಕ್ಕೆ ಹೋಗುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನೆ ಮುಂದೆ ಇರುವ ರಸ್ತೆ ಮೂಲಕ ಹೋಗುತ್ತೇವೆ ಎಂದು ನುಯುತ್ತಾರೆ. ನಮ್ಮ ಮನೆ ಮುಂದೆ ದಕ್ಷಿಣ ಬಾಜುಗೆ ರಸ್ತೆ ಇಲ್ಲ ಎಂದರೆ ಸರಿಯಲ್ಲ.

ನಮ್ಮ ಮನೆಯ ದಕ್ಷಿಣೆ ಬಾಜುಗೆ ವಾದಿಗೆ ಸೇರಿದ ಸರ್ವೆ ನಂ. 179/ಬಿ/3 ರ ಜಮೀನು ಇದ್ದು ಅಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಮನೆಯನ್ನು 2010 ರಲ್ಲಿ ಕಟ್ಟಿರುತ್ತೇವೆ. ನಾವು ಸಂಪೂರ್ಣ 2 ಗುಂಟೆ ಜವೀನಿನಲ್ಲಿ ಮನೆ ಕಟ್ಟಿರುತ್ತೇವೆ ಎಂದರೆ ಸರಿ . ಸ್ದ್ರಿ ವಚನೆ ಕಟ್ಟುವಾಗ ಪಂಚಾಯತಿ ಕಡೆಯಿಂದ ಪರವಾನಿಗೆ ಪಡೆದಿರುತ್ತೇವೆ. ಪರವಾನಿಗೆಯನ್ನು

ನ್ಯಾಯಾಲಯದಲ್ಲಿ ಹಾಜರ ಪಡಿಸಿರುತ್ತೇನೆ. 2010 ರಲ್ಲಿ ನಮ್ಮ ತಂದೆಯವರು ಪಂಚಾಯತಿ ಕಡೆಯಿಂದ ಮನೆ ಕಟ್ಟಲು ಪರವಾನಿಗೆ ಪಡೆದಿರುತ್ತಾರೆ ಎಂದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯತಿ ಅಧಿಕಾರಿ ಜೊತೇಗೆ ಶ್ಯಾಮೀಲಾಗಿ ವಿ ಪಿ ಸಿ ನಂ. 571/4 ಎಂದು ಖೊಟ್ಟಿ ದಾಖಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪರವಾನಿಗೆ ಇಲ್ಲದೇ ಅನಧೀಕೃತವಾಗಿ ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಪಂಚಾಯತಿ ಅಧಿಕಾರಿಗಳನ್ನು ಅನುಕೂಲ ಮಾಡಿಕೊಂಡು ಅವರಿಗೆ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಸಹ ನಮ್ಮ ತಂದೆ ಹೆಸರಿಗೆ ಖೊಟ್ಟಿ ವಿಪಿಸಿ ನಂಬರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತಿತದ್ದರೂ ಸಹ ನಮ್ಮ ತಂದೆಯವರಿಟಗೆ ಗೊತ್ತು ಎಂದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರ ಹೆಸರಿಗೆ ಆದ ಎಲ್ಲ ದಾಖಲೆಗಳು ಖೊಟ್ಟಿ ಇವೆ ಎಂದರೆ ಸರಿಯಲ್ಲ.

ದಿನಾಂಕ 20-04-2018 ರಂದು ಸರ್ವೆ ನಂ. 179/ಬಿ/3 ರಲ್ಲಿ ಅನದಿಧೀಕೃತವಾಗಿ ರಸ್ತೆ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದಕ್ಕೂ ಪೂರ್ವದಲ್ಲಿ ವಾದಿ ಊರಲ್ಲಿ ಇಲ್ಲದೇ ಇರುವ ಗೈರು ಫಾಯಿದೆ ತೆಗೆದುಕೊಂಡು ಕಚ್ಚಾ ರಸ್ತೆ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನೆಯ ದಕ್ಷಿಣ ಗೋಡೆಯಿಂದ ದಕ್ಷಿಣ ಬಾಜುಕ್ಕೆ ಇರುವ ಪಾಶ್ಚಾಪೂರ ಬೆಸಗಾವಿ ರತಸ್ತೆಯ ಮಧ್ಯದಲ್ಲಿ ವಾದಿಯ ರಿ .ಸ ನಂ. 179/ಬಿ/3 ರ ಜಮೀನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾವು ವಾದಿಯ ಜಮೀನಿನಲ್ಲಿ ಅನಧಿಕೃತ ಜಮೀನು ನಿರ್ಮಾಣ ಮಾಡಿದ್ದರಿಂದ ಯಮಕನಮರಡಿ ಪೋಲಿಸ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ. 179/ಬಿ/3 ರ ಜಮೀನಿನಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರುಾ ಸಹ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅನಧಿಕೃತವಾಗಿ ಹೊಸದಾಗಿ ರಸ್ತೆ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ನಾಶ ಮಾಡುವ ಸಲುವಾಗಿ ದಾವೆಗೆ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಾಜರ ಪಡಿಸಿದ ದಾಖಲೆಗಳು ಖೊಟ್ಟಿ ಇರುತ್ತವೆ ಎಂದರೆ ಸರಿಯಲ್ಲ. ಅಲ್ಲಿ ಹಾದಿ ಇದೆ ಎಂದು ತೋರಿಸಲು ಯಾವುದೇ ದಾಖಲೆ ತೋರಿಸಿಲ್ಲ ಎಂದರೆ ಸರಿಯಲ್ಲ. ವಾದಿಯ ಜಮೀನು ಶೇತಗಿ ಜಮೀನು ಇದ್ದು ಅಲ್ಲಿ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು) ಓ ಹೆ ಕೇ ಸರಿ ಅದೇ